ಜಮೀನಿದೆ. ಅವನ ತಂದೆಯ ದೇಹಾಂತ್ಯದ ನಂತರ ಅದು ಪಾಳು ಬಿತ್ತು. ಐವತ್ತು ವರ್ಷ ಹಳೆಯ ಮಣ್ಣಿನ ಮನೆ ಶಿಥಿಲವಾಗಿದೆ. ತಂದೆಯ ಖಿನ್ನತೆ ತೀವ್ರವಾಗುತ್ತಿದ್ದಂತಯೇ ಶ್ರೀಪತಿಗೆ ಕೆನಡಾದ ಉದ್ಯೋಗ, ಒಂಟಿ ಜೀವನ ಬೇಸರವೆನಿಸಲು ತೊಡಗಿತ್ತು. ಉದ್ಯೋಗವಿಲ್ಲದೆಯೂ ಬದುಕಿರುವವರೆಗೆ ಕುಳಿತುಣ್ಣಲು ಸಾಲುವಷ್ಟು ಹಣ ಗಳಿಸಿದ್ದ. ಮುಂದಿನ ಜೀವನವನ್ನು ತನಗೆ ಇಷ್ಟವಾಗುವ ರೀತಿಯಲ್ಲಿ ಉಳುಮೆ ಮಾಡುತ್ತ ತಾಯಿ-ತಂದೆಯರೊಟ್ಟಿಗೆ ಪರ್ವತೇಶ್ವರದಲ್ಲಿ ಕಳೆಯುವುದೆಂದು ತೀರ್ಮಾನಿಸಿದ.

ಕೆನಾಡಕ್ಕೆ ವಿದಾಯ ಹೇಳಿ ಪಣಜಿಯ ಪೋರ್ತುಗೀಸ್ ಗಲ್ಲಿಯ ಚಾಳದಲ್ಲಿದ್ದ ಬಾಡಿಗೆ ಮನೆಗೆ ಬಂದ ಶ್ರೀಪತಿ ಕಟ್ಟೆಮನೆಗೆ ಬಿಡಾರವನ್ನು ಸಾಗಿಸಿ, ನಂತರ ಪರ್ವತೇಶ್ವರದಲ್ಲಿ ಉಳಿಯುವ ಪ್ರಸ್ತಾವನೆಯನ್ನಿಟ್ಟ. ‘ನಿನ್ನ ಅಪ್ಪನನ್ನು ಆ ಕಾಡು ಮನೇಲಿ ಕಾಪಾಡೋದು ಕಷ್ಟಾನೊ ಮಾರಾಯಾ’ ಎಂದು ಯಮುನಕ್ಕ ಆತಂಕದಿಂದ ಹಿಂಜರಿದಳು. ‘ಅಪ್ಪ ಶಾಲೆಗೆ ಹೋಗಿದ್ದು, ಮದುವೆ ಆದದ್ದು ಕಟ್ಟೆಮನೆಯಲ್ಲಿ ಅಂತ ನೀನು ಹೇಳ್ತಿದ್ಯಲ್ಲ, ಅಲ್ಲಾದ್ರೂ ನೆನಪು ಬರ್ತದೆಯೋ ನೋಡುವಾ’ ಎಂದಿದ್ದ. ತಮ್ಮ ಜೊತೆಗೆ ಮಗನಿರುವುದು ಖಾತ್ರಿಯಾದ ನಂತರ ಒಪ್ಪದೆ ಬೇರೆ ದಾರಿಯಿರಲಿಲ್ಲ ಅವಳಿಗೆ. ಉದ್ಯೋಗ ತ್ಯಜಿಸಿ ಕಾಡು ಹಳ್ಳಿಯಲ್ಲಿ ಉಳಿಯುವ ಮಗನನ್ನು ಮದುವೆಯಾಗಲು ಯಾವ ಹೆಣ್ಣು ಒಪ್ಪಿಯಾಳು ಎಂದು ಅವಳಿಗೆ ಚಿಂತೆಯಾಯಿತು. ಜೀವನದ ಕೊನೆಗಾಲದಲ್ಲಿ ಹೆತ್ತವರ ಸನಿಹ ಮಗನಿರುವ ಕಲ್ಪನೆಯಿಂದ ಅವಳ ಜೀವಕ್ಕೆ ದೊಡ್ಡ ಭರವಸೆ, ಸಾಂತ್ವನ ಪ್ರಾಪ್ತವಾಗಿತ್ತು. ಆದರೆ ತಳಮಳ ಮಾತ್ರ ತಪ್ಪಲಿಲ್ಲ.

ಪರ್ವತೇಶ್ವರದ ಮನೆಯನ್ನು ವಾಸಿಸಲು ಯೋಗ್ಯವಾಗುವಂತೆ ಸಜ್ಜುಗೊಳಿಸುವುದಿತ್ತು. ಕಟ್ಟೆಮನೆ ಜನಾರ್ದನನಿಗೆ ಹೆಣ್ಣುಕೊಟ್ಟ ಮನೆ. ಒಡನಾಟದ ದಿನಗಳು ಸ್ಥಳ ಮಹಿಮೆಯಿಂದ ನೆನಪನ್ನು ಉದ್ದೀಪಿಸಬಹುದು. ಯಮುನಕ್ಕನಿಗೂ ತವರಲ್ಲಿ ಒಲೆ ಹಚ್ಚುವ ಅವಕಾಶ ದೊರೆತಂತಾಗುತ್ತದೆ. ಶ್ರೀಪತಿ ಹೀಗೆಲ್ಲ ಯೋಚಿಸಿ ಕೆಲಕಾಲ ಕಟ್ಟೆಮನೆಯಲ್ಲಿ ಇರಲು ಬಯಸುವುದಾಗಿ ಗಜಾನನನಿಗೆ ತಿಳಿಸಿದ್ದ. ‘ಕಾಯಂ ಬೇಕಾದ್ರೂ ಉಳ್ಕೀಬೌದು’ ಎಂದು ಉದಾರತೆಯಿಂದ ಉತ್ತರಿಸಿದ್ದ. ಮರುದಿನವೇ ಶ್ರೀಪತಿ ಪಣಜಿಯಿಂದ ಬಿಡಾರದ ಸರಂಜಾಮನ್ನು ಕಟ್ಟೆಮನೆಗೆ ಸಾಗಿಸಿದ.

3

ಈಗ ಮಾಸ್ತರರ ತಲೆ ಶ್ರೀಪತಿಯ ಅಭಿಲಾಷೆಯಂತೆ ಪರ್ವತೇಶ್ವರದಲ್ಲಿ ಜರೂರಾಗಿ ಜರುಗಬೇಕಿರುವ ಸಂಸಾರ ಸ್ಥಾಪನೆಯತ್ತ ಕೆಲಸ ಮಾಡಲಾರಂಭಿಸಿತು. ಗಜಾನನನ ಅಣತಿಯಂತೆ ಶ್ರೀಪತಿಯನ್ನು ವರಿಸಿ ಹಳ್ಳಿಯಲ್ಲಿ ಬಾಳ್ವೆ ಮಾಡಲು ಖಂಡಗಾರಿನ ಮರ್ಯಾದಸ್ಥ ಕುಟುಂಬದ ಹುಡುಗಿಯನ್ನು ನೋಡಿಟ್ಟದ್ದರು. ಕಳೆದ ವರ್ಷವಷ್ಟೆ ಮದುವೆಯಾಗಿ ಬೆಂಗಳೂರಿಗೆ ಹೋಗಿದ್ದವಳು ವಿಚ್ಛೇದನ ಪಡೆದು ತವರಿಗೆ ವಾಪಸ್ಸಾಗಿದ್ದಳು. ಹುಡುಗಿಯ ಗುಣ ಸಂಪನ್ನತೆಯಿಂದಾಗಿ ಪುನರ್‌ವಿವಾಹಕ್ಕೆ ಯಾರ ವಿರೋಧವೂ ಇರಲಿಲ್ಲ. ಪರ್ವತೇಶ್ವರದ ಪಾಳು ಭೂಮಿಯ ಸಾಗುವಳಿಗೆ ಅವಳು ಅನುರೂಪ ಹೆಂಡತಿಯಾಗುವುದರಲ್ಲಿ ಸಂಶಯವಿರಲಿಲ್ಲ. ಯಮುನಕ್ಕನ ವರದಿ ಮತ್ತು ಅವಳ ಫೋಟೊ ನೋಡಿ ಶ್ರೀಪತಿ ಒಪ್ಪಿದ್ದರಲ್ಲಿ ಆಶ್ಚರ್ಯವಿರಲಿಲ್ಲ.

ವಿದೇಶದ ಉದ್ಯೋಗ ತ್ಯಜಿಸಿ ರಸ್ತೆಯೂ ಸರಿಯಿಲ್ಲದ ಪರ್ವತೇಶ್ವರದಲ್ಲಿ ಗೃಹಸ್ಥಾಶ್ರಮ ಸ್ಥಾಪಿಸಲು ಮುಂದಾಗಿರುವ ಶ್ರೀಪತಿಯ ತೀರ್ಮಾನಕ್ಕಿಂತ ಮನೆ ಎಂದೊಪ್ಪಿಕೊಳ್ಳುವ ಜಾಗದಲ್ಲಿ ಹುಟ್ಟು, ಮದುವೆ ಮತ್ತು ಸಾವು ಸಹಜವಾಗಿ ಘಟಿಸಿರಬೇಕು ಎನ್ನುವ ಅವನ ಅಚಲ ವಿಚಾರ ಹೆಚ್ಚು ವಿಲಕ್ಷಣವಾಗಿತ್ತು. ಇತ್ತೀಚಿನ ದಿನಮಾನದಲ್ಲಿ ಮದುವೆ ಜನಿಸಿದ ಮನೆಯಲ್ಲಿ ನಡೆಯದೆ ಕಲ್ಯಾಣ ಮಂಟಪದಲ್ಲಿ ಸಿನಿಮಾ ಶೂಟಿಂಗ್‌ನಂತೆ ನಡೆಯುತ್ತವೆಯೆಂದೂ ಆಸ್ಪತ್ರೆಯಲ್ಲಿಯೇ ಹೆರಿಗೆ ಆಗುತ್ತದೆ ಎಂದೂ, ವೃದ್ಧರ ದೇಹಾಂತ್ಯ ಐಸಿಯುನಲ್ಲಿ ಆಗುತ್ತದೆ ಎಂದೂ, ಈ ಅನುಕೂಲಗಳಿಂದ ಯಾರಿಗೂ ಬದುಕಿನ ನಿಜವಾದ ಅನುಭವ ಆಗುತ್ತಿಲ್ಲವೆಂದೂ ತನ್ನ ಮನೋ ಇಂಗಿತವನ್ನು ಗಜಾನನನ ಬಳಿ ತೋಡಿಕೊಂಡಿದ್ದ. ತನ್ನ ಹೆತ್ತವರ ಕೊನೆಗಾಲ, ಕೈ ಹಿಡಿಯುವ ಹುಡುಗಿಯ ವಿವಾಹ ಮತ್ತು ತುಂಬಿದ ಗರ್ಭಿಣಿ ಸೋದರಿ ಜಾನಕಿಯ ಪ್ರಸವ ಮತ್ತು ಬಾಣಂತನ ಪರ್ವತೇಶ್ವರದ ಮನೆಯಲ್ಲಿ ಜರುಗಬೇಕೆಂಬ ಆಸೆಯನ್ನು ಹಂಚಿಕೊಂಡಿದ್ದ.